ಓ ಎಸ ನಂ.70/2022
ಪಿ.ಡಬ್ಲ್ಯೂ-1 ಲಕ್ಷ್ಮಣ ತಂದೆ ಶರಣಪ್ಪ

(ಇಂದು ದಿನಾಂಕಃ 08-04-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)

ಪಾಟೀ ಸವಾಲುಃ ಶ್ರೀ ಎಸ್ ಕೆ ಪಿ ವಕೀಲರಿಂದ.

ಸರ್ವೆ ನಂ.78 ಮೊದಲು ಒಟ್ಟು 21 ಎಕರೆ 25 ಗುಂಟೆ 1954-55 ರಲ್ಲಿ ಇರುತ್ತದೆ. ಅದರಲ್ಲಿ ಒಟ್ಟು 4 ಭಾಗಗಳು ಆಗಿರುತ್ತವೆ. ಸರ್ವೆ ನಂ.77 ಒಟ್ಟು 19 ಎಕರೆ 34 ಗುಂಟೆ ಇರುತ್ತದೆ. ಸರ್ವೆ ನಂ.78 ಒಟ್ಟು 19 ಎಕರೆ 38 ಗುಂಟೆ ಇರುತ್ತದೆ ಎಂದರೆ ಸಾಕ್ಷಿ ಅದು 1963-64 ರಲ್ಲಿ ತಿದ್ದುಪಡಿ ಆಗಿರುತ್ತದೆ ಎನ್ನುತ್ತಾರೆ. ಸದರಿ ತಿದ್ದುಪಡಿ ಪ್ರಶ್ನಿಸಿ ನಾವು ಯಾವುದೇ ತಕರಾರು ಹಾಕಿಲ್ಲ. ಸರ್ವೆ ನಂ.77 ರಲ್ಲಿ ಒಟ್ಟು 12 ಎಕರೆ 36 ಗುಂಟೆ ಮಾತ್ರ ಇರುತ್ತದೆ ಎಂದರೆ ಸರಿಯಲ್ಲ. ನನ್ನ ವಾದಪತ್ರದಲ್ಲಿ ತಿಳಿಸಿದ ಅರ್ಜುನ, ಸಹದೇವಪ್ಪ, ಶರಣಪ್ಪ, ಲಕ್ಷ್ಮಣ ಮತ್ತು ಭೀಮಶಾರವರು 1963-64 ರಲ್ಲಿ ಭಾಗವಾಗಿರುತ್ತಾರೆ. 5 ಜನಕ್ಕೆ ಹೆಚ್ಚು-ಕಡಿಮೆ ಜಮೀನು ಆಗಿ ಭಾಗವಾಗಿರುತ್ತದೆ. ನನ್ನ ವಾದಪತ್ರದಲ್ಲಿ ನಮ್ಮ ತಂದೆ ಶರಣಪ್ಪರವರಿಗೆ 11 ಎಕರೆ 27 ಗುಂಟೆ ಜಮೀನು ಬಂದ ಕುರಿತು ತಿಳಿಸಿರುತ್ತೇನೆ ಎಂದರೆ ಸರಿ. ಸರ್ವೆ ನಂ.78 ಮಾತ್ರ ಭಾಗವಾಗಿರುತ್ತದೆ. ಸರ್ವೆ ನಂ.77 ರಲ್ಲಿ ಅರ್ಜುನ ಮತ್ತು ಸಹದೇವಪ್ಪರವರ ಮದ್ಯೆ ಮಾತ್ರ ಭಾಗವಾಗಿರುತ್ತದೆ.

2. ಸರ್ವೆ ನಂ.78 ರಲ್ಲಿ ಶರಣಪ್ಪ, ಸಹದೇವಪ್ಪ, ಭೀಮಶಾ ಮತ್ತು ಲಕ್ಷ್ಮಣರವರ ಮದ್ಯೆ ಭಾಗವಾಗಿರುತ್ತದೆ. ನಾನು ಹೇಳಿದ ಸಹದೇವಪ್ಪ 1ನೇ ಪ್ರತಿವಾದಿ ಸಹದೇವಪ್ಪರವರ ತಾತ ಸಹದೇವಪ್ಪ ಎಂದರೆ ಸರಿ. ಪೀರಪ್ಪನವರಿಗೆ ಒಟ್ಟು 21 ಎಕರೆ 25 ಗುಂಟೆ, 6 ಎಕರೆ 34

ಗುಂಟೆ ಮತ್ತು 12 ಎಕರೆ 38 ಗುಂಟೆ ಆಸ್ತಿಗಳು ಇದ್ದವು. ಪೀರಪ್ಪನವರಿಗೆ ಗರೂರಿನಲ್ಲಿ ಬೇರೆ ಆಸ್ತಿಗಳು ಇದ್ದವು, ಅವುಗಳನ್ನು ನಾವು ಹಂಚಿಕೊಂಡಿಲ್ಲ.

3. ನಾನು ದಾವಾ ಆಸ್ತಿ 2 ಎಕರೆ 39 ಗುಂಟೆ ಇರುವ ಕುರಿತು ಪಹಣಿಯನ್ನು ಹಾಕಿರುತ್ತೇನೆ. ದಾವಾ ಆಸ್ತಿ 2 ಎಕರೆ 39 ಗುಂಟೆಯ ಚೆಕ್ಕುಬಂದಿ ಗೊತ್ತು. ಪೂರ್ವಕ್ಕೆ ಕುಂಬಾರರವರ ಜಮೀನು, ಪಶ್ಚಿಮಕ್ಕೆ ವಾಲೀಕರರವರ ಜಮೀನು, ಉತ್ತರಕ್ಕೆ ಸಹದೇವಪ್ಪರವರ ಜಮೀನು ಮತ್ತು ದಕ್ಷಿಣಕ್ಕೆ ಪಾರ್ವತಿ ಮತ್ತು ಬಸವರಾಜರವರ ಜಮೀನು ಇರುತ್ತವೆ. ಸರ್ವೆ ನಂ.78 ರಲ್ಲಿ 4 ಎಕರೆ 27 ಗುಂಟೆ ಸಹದೇವಪ್ಪನಿಗೆ ಮತ್ತು 11 ಎಕರೆ 27 ಗುಂಟೆ ಶರಣಪ್ಪರವರಿಗೆ ಜಮೀನುಗಳು ಇತ್ತು. ನಾನು ಜಮೀನು ಯಾರಿಗೂ ಮಾರಾಟ ಮಾಡಿಲ್ಲ. ಲಕ್ಷ್ಮಣ ನನ್ನ ಕಾಕ ಆಗಬೇಕು. ನನ್ನ ಕಾಕ ಲಕ್ಷ್ಮಣರವರಿಗೆ 2 ಎಕರೆ 28 ಗುಂಟೆ ಜಮೀನು ಹೋಗಿರುತ್ತದೆ. ಅವರು ಪಾರ್ವತಿ ಎನ್ನುವವರಿಗೆ ಜಮೀನು ಮಾರಾಟ ಮಾಡಿರುತ್ತಾರೆ. ಸಿದ್ರಾಮಪ್ಪ ಕಾರಬಾರಿರವರು ಲಕ್ಷ್ಮಣರವರಿಂದ ಜಮೀನು ಖರೀದಿಸಿ ಪಾರ್ವತಿಯವರಿಗೆ ಮಾರಾಟ ಮಾಡಿರುತ್ತಾರೆ. ಲಕ್ಷ್ಮಣ ಮತ್ತು ಸಿದ್ರಾಮಪ್ಪರವರನ್ನು ನಾನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಸಾಕ್ಷಿ ಖರೀದಿದಾರರಾದ ಪಾರ್ವತಿಯವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎನ್ನುತ್ತಾರೆ.

4. 3 ನೇ ಪ್ರತಿವಾದಿ ಬಸವರಾಜ ಭೀಮಶಾರವರಿಂದ ಆಸ್ತಿ ಖರೀದಿಸಿರುತ್ತಾರೆ. ಸದರಿ ಖರೀದಿ ಪತ್ರಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಸೋಮನಾಥ ಕುಂಬಾರವರಿಗೆ 3 ನೇ ಪ್ರತಿವಾದಿ ಬಸವರಾಜ ಜಮೀನು ಮಾರಾಟ ಮಾಡಿರುತ್ತಾರೆ. 2 ವರ್ಷಗಳ ಹಿಂದೆ ಸದರಿ ಮಾರಾಟ ಆಗಿರುತ್ತದೆ. ಸದರಿ ಕ್ರಯಪತ್ರ ನಾನು ನ್ಯಾಯಾಲಯಕ್ಕೆ

ಸಲ್ಲಿಸಿಲ್ಲ. ಸದರಿ ಸೋಮನಾಥನನ್ನು ನಾನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ಈ ದಾವೆ ಹಾಕಿದ ಮೇಲೆ ಸದರಿ ಮಾರಾಟ ಆಗಿರುತ್ತದೆ ಎನ್ನುತ್ತಾರೆ.

5. ದಾವಾ ಆಸ್ತಿಯ ದಕ್ಷಿಣಕ್ಕೆ ಈಗ ಸೋಮನಾಥ ಕುಂಬಾರ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿ ಪೂರ್ವಕ್ಕೆ ಪ್ರಭು ಕುಂಬಾರವರ ಜಮೀನು ಇರುತ್ತದೆ ಎಂದರೆ ಸರಿ. ನನ್ನ ತಂದೆ ಶರಣಪ್ಪರವರು ಮೃತರಾಗಿ ಸುಮಾರು 50 ವರ್ಷಗಳಾಗಿರುತ್ತವೆ. ನಾನು ಹೇಳಿದ ಭಾಗವು ನಮ್ಮ ತಂದೆಯವರು ಮೃತರಾದ ನಂತರ ಆಗಿರುತ್ತದೆ. ಭಾಗದಂತೆ ನಮ್ಮ ಹೆಸರಿಗೆ ಮುಟೇಷನ ಆಗಿತ್ತು. ಸಾಕ್ಷಿ ಅದು ತಪ್ಪಾಗಿ ಆಗಿತ್ತು ಎನ್ನುತ್ತಾರೆ. 1 ನೇ ಪ್ರತಿವಾದಿಯ ತಾತ ಸಹದೇವಪ್ಪನಿಗೆ ಭಾಗದಲ್ಲಿ 6 ಎಕರೆ 4 ಗುಂಟೆ ಜಮೀನು ಬಂದಿತ್ತು ಎಂದರೆ ಸರಿ. ಸದರಿ ಜಮೀನು ಸಹದೇವಪ್ಪನಿಂದ ಅವರ ಮಗ ಕಾಶೀರಾಯನ ಹೆಸರಿನಲ್ಲಿ ಆಗಿತ್ತು ಎಂದರೆ ಸರಿ. ಕಾಶೀರಾಯನ ನಂತರ ಅವರ ಮಗನಾದ 1 ನೇ ಪ್ರತಿವಾದಿ ಸಹದೇವಪ್ಪರವರಿಗೆ ಸದರಿ ಜಮೀನು ಆಗಿರುತ್ತದೆ ಎಂದರೆ ಸರಿ. 1963-64 ರಿಂದ ಸಹದೇವಪ್ಪನ ಹೆಸರಿನಲ್ಲಿ 6 ಎಕರೆ 4 ಗುಂಟೆ ಜಮೀನು ಇರುವುದನ್ನು ಈ ದಾವೆ ಹಾಕುವ ಮೊದಲು ಪ್ರಶ್ನಿಸಲಾಗಿದೆಯೇ ಎಂದರೆ ಸಾಕ್ಷಿ ಉಚ್ಚನ್ಯಾಯಾಲಯದಲ್ಲಿ ಮತ್ತು ಎಲ್ಲ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿದೆ ಎನ್ನುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.